**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು**

**ಸಿಸಿ. ನಂಬರ್ 1922/2024**

ಫ್ರಾ.ಸಾಃ 1

**ದಿನಾಂಕಃ26.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆಃ**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಬಿಎ ವಕೀಲರಿಂದಃ**

ಅಪಘಾತ ಯಾವ ರೀತಿ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಅಲ್ಲಿ ಇರುವವರು ಹೇಳಿದ ಕಾರಣ ಗೊತ್ತಾಗಿರುತ್ತದೆ. ವಾಹನಗಳ ನಂಬರ್ ನನಗೆ ಗೊತ್ತಿಲ್ಲ ಎಂದರೆ ಸರಿ. ಅಪಘಾತಪಡಿಸಿದ ವಾಹನ ಟೆಂಪೋ ಆಗಿರುತ್ತದೆ, ಅದು ಯಾವ ಬಣ್ಣದ್ದು ಎಂದು ಗೊತ್ತಿಲ್ಲ. ಆ ದಿನ ಅಪಘಾತಪಡಿಸಿದ ಟೆಂಪೋವನ್ನು ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಚಲಾಯಿಸುತ್ತಿದ್ದರು. ಆರೋಪಿಯ ವಾಹನವನ್ನು ಚಲಾಯಿಸುತ್ತಿರಲಿಲ್ಲ, ಈ ಅಪಘಾತಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಅಪಘಾತ ಆದ ಅರ್ದ ಗಂಟೆ ಸಮಯಕ್ಕೆ ನಾನು ಸ್ಥಳಕ್ಕೆ ಹೋಗಿರುತ್ತೇನೆ. ನಿಪಿ 1 ರ ದೂರನ್ನು ನಾನೇ ಬರೆದಿರುತ್ತೇನೆ. ಮಹಜರ್ ಗೆ ಅಪಘಾತದ ದಿನವೇ ಅಪಘಾತ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಮಹಜರ್ ಸಮಯದಲ್ಲಿ ಇಬ್ಬರು ಅಥವಾ ಮೂರು ಜನ ಪೊಲೀಸರು ಬಂದಿದ್ದರು. ದೂರು ಕೊಟ್ಟ ನಂತರ ಪೊಲೀಸರು ಬಂದಿರುತ್ತಾರೆ. ಘಟನೆಯ ದಿನವೇ ಕೋಲಾರದ ಆಸ್ಪತ್ರೆಗೆ ಸೇರಿಸಿ ಮಧ್ಯಾಹ್ನ ನಂಗಲಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ದೂರು ಕೊಟ್ಟ ನಂತರ ಪೊಲೀಸ್ ಠಾಣೆಯಿಂದ ನೇರವಾಗಿ ಮತ್ತೆ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ ಒಂದೂವರೆ ಎರಡು ತಿಂಗಳು ಇದ್ದೆವು. ಆಸ್ಪತ್ರೆಯಿಂದ ಬಿಡುಗಡೆಯಾಗುವವರೆಗೂ ಊರಿಗೆ ಬಂದಿರುವುದಿಲ್ಲ.

ಮಹಜರ್ ಅನ್ನು ಪೊಲೀಸರು ಎಷ್ಟು ಗಂಟೆ ಸಮಯದವರೆಗೆ ಮಾಡಿರುತ್ತಾರೆ ಎಂದರೆ ನೆನಪಿಲ್ಲ. ಮಹಜರ್ ಸಮಯದಲ್ಲಿ ಸುಮಾರು 50-60 ಜನರು ಸೇರಿದ್ದರು. ಮಹಜರ್ ಅನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ಗೊತ್ತಿಲ್ಲ. ಮಹಜರ್ ಗೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದರೆ ಗಮನಿಸಿಲ್ಲ. ಪೊಲೀಸರು ಘಟನಾ ಸ್ಥಳದಲ್ಲಿ ಬಂದು ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಘಟನೆಯ ದಿನ ಮೋಟಾರ್ ಬೈಕಿನಲ್ಲಿ ಹೋಗುತ್ತಿದ್ದರು. ಮೋಟಾರ್ ಬೈಕ್ ಚಲಾಯಿಸಲು ನನ್ನ ಗಂಡನ ಬಳಿ ಚಾಲನಾ ಪರವಾಗಿ ಇತ್ತು. ಚಾಲನಾ ಪರವಾನಗಿಯನ್ನು ಪೊಲೀಸರಿಗೆ ಕೊಟ್ಟಿರುತ್ತಾರೆ.

ನನ್ನ ಗಂಡನಿಗೆ ಚಾಲನಾ ಪರವಾಗಿ ಇರಲಿಲ್ಲ, ನನ್ನ ಗಂಡನಿಗೆ ಮೋಟಾರ್ ವಾಹನ ಚಲಾಯಿಸಲು ಬರದೇ ಅವರ ನಿರ್ಲಕ್ಷ್ಯತನದಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ದೂರು ಕೊಟ್ಟ ನಂತರ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ. ಆರೋಪಿ ಅಪಘಾತಪಡಿಸಿಲ್ಲ, ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸ. ಇದೆ

ಸಹಿ/-
(ಶ್ರೀಮತಿ ರೋಹಿಣಿ. ಡಿ)
1 ನೇ ಅಪರ ಸಿ.ಜೆ ಮತ್ತು ಜೆಎಂಎಫ್ ಸಿ
ಮುಳಬಾಗಿಲು